# ಏಳಿ ಮೊಸರ ಕಡೆಯಿರೇಳಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 30
2. **Note:** Singer has followed these lyrics.

ರಾಗ: ಮೋಹನ　　　　　ತಾಳ: ಅಟ

ಏಳಿ ಮೊಸರ ಕಡೆಯಿರೇಳಿ, ಗೋ-
ಪಾಲ ಚೂಡಾಮಣಿ ಏಳದ ಮುನ್ನ　　॥ ಪ ॥

ಇಂದುಮುಖಿಯರೆದ್ದು ಮುಖವನೆ ತೊಳೆದು ಶ್ರೀ-
ಗಂಧ-ಕಸ್ತೂರಿ-ಕುಂಕುಮಗಳಿಟ್ಟು
ಚಂದ್ರಗಾವಿಯ ಸೀರೆಯ ನೀರಿವಿಟ್ಟು ಮು-
ಕುಂದನ ಪಾಡುತ ಚದುರೆಯರೆಲ್ಲ　　॥ 1 ॥

ಹೊಂಗೊಡ ಬೆಳಗಿಟ್ಟು ಪೊಸ ಮೊಸರನೆ ತುಂಬಿ
ರಂಗನೀಲದ ಕಡೆಗೋಲನಿಟ್ಟು
ಶೃಂಗಾರವಾದ ರೇಶಿಮೆಯ ನೇಣನೆ ಹಿಡಿದು
ರಂಗನ ಪಾಡುತ ಚದುರೆಯರೆಲ್ಲ　　॥ 2 ॥

ಬಡನಡು ಬಳುಕುತ ಕುಚಗಳಲ್ಲಾಡುತ
ಕಡಗ-ಕಂಕಣ ಝುಣ ಝುಣರೆನ್ನುತ
ಮುಡಿದ ಮಲ್ಲಿಗೆ ಹೂವು ಎಡ ಬಲ ಕುದುರೆ ಪಾ-
ಲ್ಗಡಲೊಡೆಯನ ಪಾಡುತ ಚದುರೆಯರು　　॥ 3 ॥

ಹುಸಿ ನಿದ್ದೆಯಲಿ ಶ್ರೀ ಕೃಷ್ಣನು ಮಲಗಿರೆ
ಹಸಿದು ಆಕಳಿಸಿ ಬಾಯಾರುತಲಿ
ಮುಸುಕಿನೊಳಿದ್ದು ಬೆಣ್ಣೆಯ ಬೇಡುತಲಿರೆ

ಶಶಿವದನನಿಗೆ ಬೆಣ್ಣೆಯ ನೀಡಲೋಸುಗ || 4 ||

ಏಣಾಂಕಮುಖಿಯರು ಹೊಸ ಬೆಣ್ಣೆಯನು ತೆಗೆದು
ಪ್ರಾಣ ಪದಕ ಕೃಷ್ಣನಿಗೆ ಕೊಡಲು
ಚಾಣೂರ ಮಲ್ಲನ ಗೆಲಿದು ಬಾರೆನುತಲಿ
ಜಾಣ ಪುರಂದರ ವಿಠಲನಪ್ಪಲು ಗೋಪಿ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನು ಏಳುವುದಕ್ಕಿಂತ ಮೊದಲೇ, ಎಲ್ಲರೂ ಎದ್ದು ಮೊಸರನ್ನು ಕಡೆಯಿರಿ. ಏಳಿರಿ - ಎಂದು ಯಶೋದೆ ನೆರೆಹೊರೆಯವರನ್ನೆಲ್ಲ ಎಬ್ಬಿಸುತ್ತಾಳೆ.

**ಚೂಡಾಮಣಿ** = ಶ್ರೇಷ್ಠ

**ಚಂದ್ರಗಾವಿ** = ಕೆಂಬಣ್ಣದ ಸೀರೆ

**ನಿರಿ** = ನೀರಿಗೆ

**ಏಣಾಂಕ** = ಚಂದ್ರ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, Gopala, gandha, Kasturi, mukunda, ranga, mallige, kudure, nidde, benne, gopi, Chandra,
**Pravachana:** NA
**Explanation:** NA